ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

Tuesday, February 9th, 2010

# ನಗರದಲ್ಲಿ ಲಾಸ್ಯ ಸಂಭ್ರಮ



**ಬೆಂಗಳೂರು, ಫೆ.9–** ಜೈನ್ ವಿಶ್ವವಿದ್ಯಾಲಯದ ಮ್ಯಾನೇಜ್‌ಮೆಂಟ್ ಸ್ಟಡಿ ಸೆಂಟರ್ ಹಮ್ಮಿಕೊಂಡಿದ್ದ ಲಾಸ್ಯ ಸಾಂಸ್ಕೃತಿಕ ಕಾರ್ಯಕ್ರಮ ಮನ ಸೆಳೆಯಿತು.

ಇದೇ ಮೊದಲ ಬಾರಿಗೆ ಕಾಲೇಜು ಮಟ್ಟದ ರಾಷ್ಟ್ರೀಯ ಸಾಂಸ್ಕೃತಿಕ ಸ್ಪರ್ಧೆ ಇದಾಗಿದ್ದು, ದೇಶದ ವಿವಿಧ ಕಾಲೇಜಿನ ತಂಡಗಳು ಪಾಲ್ಗೊಂಡಿದ್ದವು. ಎರಡು ದಿನಗಳ ಸಮಾರಂಭದಲ್ಲಿ 35 ಕಾಲೇಜಿನ ವಿದ್ಯಾರ್ಥಿಗಳು ಹಾಡು, ನೃತ್ಯ, ಉಪಾಸನೆ, ಸಾಂಪ್ರದಾಯಿಕ ಕಲೆಗಳ ಪ್ರದರ್ಶನ, ಚರ್ಚಾ ಸ್ಪರ್ಧೆ, ರಸ ಪ್ರಶ್ನೆ ಸೇರಿದಂತೆ ಹಲವು ಕಾರ್ಯಕ್ರಮಗಳು ಜರುಗಿದವು.

ನಗರದ ದಯಾನಂದ ಸಾಗರ್ ಕಾಲೇಜು, ಎಂಇಎಸ್ ಕಾಲೇಜ್, ವಿಜಯ ಕಾಲೇಜ್, ಆರ್‌ವಿ ಕಾಲೇಜ್, ಶೇಷಾದ್ರಿಪುರಂ ಕಾಲೇಜ್, ಮೌಂಟ್ ಕಾರ್ಮೆಲ್, ಸೆಂಟ್ ಜೋಸೆಫ್, ಜ್ಯೋತಿ ನಿವಾಸ್, ಕ್ರೈಸ್ಟ್ ಕಾಲೇಜ್ ಮತ್ತಿತರ ಸಂಸ್ಥೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಕೊಲ್ಕತ್ತಾ ಭಾವನಿಪುರ ಕಾಲೇಜು ತಂಡ ಸಮಗ್ರ ಪ್ರಶಸ್ತಿ ಹಾಗೂ ಕ್ರೈಸ್ಟ್ ಕಾಲೇಜ್ ರನ್ನರ್‌ಅಪ್ ಪ್ರಶಸ್ತಿ ಪಡೆದವು.